ಫಸಲು ಬೆಳೆದು ನಿಂತಿದ್ದು, ಕಾರ್ಖಾನೆಗಳು ಇನ್ನೂ ಪ್ರಾರಂಭವಾಗಿಲ್ಲ. ಅದೂ ಅಲ್ಲದೆ ಕಾರ್ಖಾನೆಗಳಿಂದ ಕಬ್ಬು ಅರೆಯುವ ಕಾರ್ಯ ಕೈಗೊಳ್ಳುವ ಮುಂಚೆ ರಾಜ್ಯ ಸರ್ಕಾರ ಕಬ್ಬಿನ ದರ ನಿಗದಿಪಡಿಸುವ ಪರಿಪಾಠವಿದ್ದೂ, ಈ ವರ್ಷ ದರ ನಿಗಧಿಪಡಿಸದಿರುವುದು, ತಡವಾಗಿರುವುದರಿಂದ ರೈತರಿಗೆ ತುಂಬಾ ತೊಂದರೆಯಾಗಿರುತ್ತದೆ. ಈ ಬಗ್ಗೆ ಕೈಗಾರಿಕಾ ಮಂತ್ರಿಗಳ ಹೇಳಿಕೆಯನ್ನು ತಮ್ಮ ಮೂಲಕ ಬಯಸುತ್ತೇನೆ.

SRI S.M, YAHYA (Minister for Industres, Energy and wakfs).— Mrs Deputy Speaker,

The State Government normally announces the State Advisory Price for Sugar Cane during June/July, every year. For the 1987-88 season State Advisory Price of Rs. 285 P.M,T,, inclusive of purchase-tax Rebate of Rs. 12/-P.M.T.. was announced on 30th July 1988. For the 1988-89 season, S.A.P of Rs. 325/- inclusive of P,T rebate of Rs. 12/-P.M.T was announced on 10th July 1989.

The following table indicates the Statutory Minimum Cane Price announced by Government of India and the State Advised Cane Price for the lasn four years.—

| Year | Statutory Min. Cane price announced by GOI linked to 8.5% recovery per M.T. | State-advised Cane prce linked to 8.5% recovery per M.T. | Uniform cane price suggested by the State Government per M.T. | |
|---|---|---|---|---|
| 1985-86 | 165.00 | 185.00 | 240.00 | Inclusive of Rs 12/- purchase Tax rebate |
| 1986-87 | 170.00 | 195.00 | 265.00 | |
| 1987-88 | 185.00 | 205.00 | 275:00 | |
| 1988-89 | 195.00 | 215.00 | 285.00 | |
| 1989-90 | 220.00 | 230.00 | 325.00 | |
| 1990-91 | 230.00 | - | - | |

Like in the previous years, the Government is considering fixing the State Advisory pricef or Sugarcane for the season commencing in July and a decision in this regard will be taken shortly by the Government.

೯. ಧಾರವಾಡ ಜಿಲ್ಲೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಹುದೆ ಗಳನ್ನು ಭರ್ತಿ ಮಾಡುವುದು

ಶ್ರೀ ಬಿ. ಹೆಚ್. ಬನ್ನಿಕೊಡ್ (ಹಿರೇಕೆರೂರು). — ಮಾನ್ಯ ಅಧ್ಯಕ್ಷರೇ, ಧಾರವಾಡ ಜಿಲ್ಲೆಯಲ್ಲಿ ೭೫೨ ಪ್ರಾಥಮಿಕ ಶಿಕ್ಷಕರನ್ನು ಆಯ್ಕೆ ಮಾಡಿದ್ದು, ಕೇವಲ ೩೨೮ ಜನ ಶಿಕ್ಷಕರನ್ನು ಭರ್ತಿ ಮಾಡಲು ಸರ್ಕಾರಿ ಆದೇಶ ಕೊಟ್ಟಿದ್ದು, ಅದೇ ಆಯ್ಕೆಯಾಗಿರುವ ಉಳಿದ ೪೨೪ ಶಿಕ್ಷಕರನ್ನು ಸರ್ಕಾರ ಕೂಡಲೇ ಭರ್ತಿ ಮಾಡಲು ಆದೇಶ ನೀಡುವ ಬಗ್ಗೆ, ಹಾಗೂ ಜಿಲ್ಲೆಯಲ್ಲಿ ೧೭ ನೂರು ಶಿಕ್ಷಕರ ಹುದ್ದೆಗಳು ಖಾಲಿಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳ ಬಗ್ಗೆ ಮಾನ್ಯ ಶಿಕ್ಷಣ ಸಚಿವರ ಗಮನವನ್ನು ಸೆಳೆಯ ಬಯಸುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಸಚಿವರು).— ಮಾನ್ಯ ಉಪಾಧ್ಯಕ್ಷೆಣಿ ರವರೆ, ತಮ್ಮ ಅಪ್ಪಣೆ ಪಡೆದು ಈ ಒಂದು ಹೇಳಿಕೆಯನ್ನು ಸಭೆಯ ಮುಂದಿಡಲು ಇಚ್ಛಿಸುತ್ತೇನೆ.

೧೯೮೯-೯೦ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ೭೫೨ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಖಾಲಿ ಇದ್ದು, ಆ ಜಿಲ್ಲಾ ಆಯ್ಕೆ ಸಮಿತಿಯಿಂದ ನೇಮಕಾತಿ ಕಾರ್ಯಕ್ರಮ ಜರುಗಿಸಲಾಯಿತು. ಈ ೭೫೨ ಹುದ್ದೆಗಳಲ್ಲಿ ಕೇಂದ್ರ ಸರ್ಕಾರದ ಯೋಜನೆಯೊಂದರ ಅನ್ವಯ ಮಂಜೂರಾದ ೧೦೨ ಹಿಂದಿ ಶಿಕ್ಷಕರ ಹುದ್ದೆಗಳೂ ಸೇರಿರುತ್ತವೆ. ಆರ್ಥಿಕ ಮಿತವ್ಯಯ ಜಾರಿಯಲ್ಲಿದ್ದುದರಿಂದ ಹಿಂದಿ ಶಿಕ್ಷಕರನ್ನು ಒಳಗೊಂಡಂತೆ ೪೩೦ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಮಾತ್ರ ಅವಕಾಶವಿತ್ತು. ಉಳಿದ ೩೨೨ ಹುದ್ದೆಗಳಿಗೆ ಭರ್ತಿ ಮಾಡಲು ಮಂಜೂರಾತಿ ಇರಲಿಲ್ಲ.

ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಸದ್ಯದ ಮಿತವ್ಯಯ ಆದೇಶದಿಂದ ಸಡಿಲಗೊಳಿಸಲಾಗಿದೆ. ವಿದ್ಯಾರ್ಥಿಗಳ ದಾಖಲಾತಿಗೆ ಹೊಂದಿಕೊಂಡಂತೆ ಹೆಚ್ಚುವರಿ ೧೭೦೦ ಶಿಕ್ಷಕರ ಹುದ್ದೆಗಳನ್ನು ಮಂಜೂರು ಮಾಡಬೇಕೆಂಬ ವಿಷಯವನ್ನು ಈ ಬಗ್ಗೆ ಅಂಕಿ ಅಂಶಗಳನ್ನು ತರಿಸಿಕೊಂಡು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

## ೫. ವಿತ್ತೀಯ ಕಾರ್ಯಕಲಾಪಗಳು

### ೧೯೯೦-೯೧ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ

(ಭೂಕಂದಾಯ, ಮುದ್ರಾಂಕ (ಸ್ಟ್ಯಾಂಪುಗಳು) ಮತ್ತು ನೋಂದಣಿ, ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರ, ಮತೀಯ ಮತ್ತು ಧರ್ಮಾದಾಯ ಸಂಸ್ಥೆಗಳು, ಕಾರ್ಮಿಕ ಮತ್ತು ಉದ್ಯೋಗ ಇಲಾಖೆಗಳು)

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರ ಹೆಸರಿನಲ್ಲಿ ಮಂಡಿಸಿರತಕ್ಕಂಥ ವಿವಿಧ ಇಲಾಖೆಗಳ ಬೇಡಿಕೆಗಳ ಬಗ್ಗೆ ಕೆಲವು ವಿಚಾರಗಳನ್ನು ತಮ್ಮ ಮುಂದೆ ಪ್ರಸ್ತಾಪ ಮಾಡುವುದಕ್ಕೆ ತಮ್ಮ ಅಪ್ಪಣೆಯನ್ನು ಕೋರುತ್ತೇನೆ. ನಮ್ಮ ರಾಜ್ಯದಲ್ಲಿ ಅತೀ ಮುಖ್ಯವಾದ ಇಲಾಖೆಗಳಲ್ಲಿ ಕಾರ್ಮಿಕ ಇಲಾಖೆಯೂ ಪ್ರಥಮ ಎಂದು ಪರಿಗಣಿಸ ಬೇಕಾಗುತ್ತದೆ. ಬಹುಶಃ ಕಾರ್ಮಿಕ ಇಲಾಖೆ ಎಂದು ಕರೆಯುವುದರ ಬದಲು ಇದನ್ನು ಮಾಲೀಕರ ಇಲಾಖೆ ಎಂದು ಕರೆಯಿ ಬಹುದೇನೋ ಎನ್ನುವಷ್ಟರ ಮಟ್ಟಿಗೆ ಇದರ ಕಾರ್ಯ ವೈಖರಿ ನಡೆದಿದೆ. ಈ ನಮ್ಮ ಕಾರ್ಮಿಕ ಇಲಾಖೆಯು ಇವೊತ್ತಿನ ದಿವಸ ಕಾರ್ಮಿಕ ವರ್ಗದವರ ಹಿತಾಸಕ್ತಿಯನ್ನು ಕಾಪಾಡುವುದರಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಹೇಳಬಯಸುತ್ತೇನೆ. ಇದು ಒಂದು ರೀತಿಯಲ್ಲಿ ಮಾಲೀಕರುಗಳ ಪಿಜಂಟರಾಗಿ ಕೆಲಸ ಮಾಡುತ್ತಾ ಇದೆಯೇನೋ ಎನ್ನುವ ಭಾವನೆಯು ಇವೊತ್ತು ಸಾಮಾನ್ಯರಲ್ಲಿ ಬರುತ್ತಿದೆ. ನಾನು ಮಾನ್ಯ ಅಧ್ಯಕ್ಷರೂ, ಹಿರಿಯರೂ ಆದ ಕೆ ಹೆಚ್. ಪಾಟೀಲರಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ತಾವುಗಳು ಎಲ್ಲಿಯವರೆವಿಗೆ ಈ ಖಾತೆಯನ್ನು ಹೊಂದಿರುತ್ತೀರೋ ಅಲ್ಲಿಯವರೆಗೆ ಅದರೊಳಗಾಗಿ ಈ ಕಾರ್ಮಿಕ ಇಲಾಖೆಯನ್ನು ಒಂದು ಕಾರ್ಮಿಕರ ಹಿತರಕ್ಷಣೆಯ ಇಲಾಖೆಯನ್ನಾಗಿ ಮಾಡಬೇಕು. ಒಳ್ಳೆಯ ಕಾರ್ಯ ನೀತಿ ಮತ್ತು ಆದರ್ಶಗಳನ್ನು ಆದರಲ್ಲಿ ತುಂಬಿ ಆದಕ್ಕೊಂದು ಹೊಸ ಜೀವಕಳೆಯನ್ನು ಕೊಟ್ಟು ಕಾರ್ಮಿಕರ ಹಿತವನ್ನು ಕಾಯುವಲ್ಲಿ ಬೇಕಾಗುವಂಥ ಸೂಕ್ತ ನಿಬಂಧನೆಗಳನ್ನು ಮಾಡಿಕೊಂಡು ಕಾರ್ಮಿಕವರ್ಗದವರ ಏಳಿಗೆ ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ. ಇಂಥ ಒಂದು ಕಾರ್ಮಿಕರ ರಕ್ಷಣ ಕಾರ್ಯ ತಮ್ಮ ಕಾಲದಲ್ಲಿ ಸೂಕ್ತ ರೀತಿಯಲ್ಲಿ ಸಮರ್ಪಕವಾಗಿ ಆಯಿತು ಎಂದು ಮುಂದಿನ ಜನಸಾಮಾನ್ಯರೂ ಪ್ರಶಂಶಿಸುವ ರೀತಿಯಲ್ಲಿ ತಾವುಗಳು ಕಾರ್ಯನಿರ್ವಹಣೆ ಮಾಡಬೇಕೆಂದು ಕೋರಿ ಆ ಒಂದು ವಿಶ್ವಾಸವನ್ನು ಕೂಡ ವ್ಯಕ್ತಪಡಿಸುತ್ತೇನೆ, ತಮ್ಮ ಸತ್ಕಾರ್ಯಗಳನ್ನು ಜನರು ಮುಂದೆ ನೆನಪಿನಲ್ಲಿಟ್ಟುಕೊಳ್ಳಬಹುದಾಗಿರಬೇಕು ಎಂದು ನಾನು ಆಶಿಸುತ್ತೇನೆ. ಮಂತ್ರಿ ಪದವಿ ಇಂದು ಇದ್ದು ನಾಳೆ ಹೋಗಬಹುದು. ಅದು ಯಾರಿಗೂ ಶಾಶ್ವತವಲ್ಲ ಆದರೆ ಆ ಅವಧಿಯಲ್ಲಿ ತಾವುಗಳು ನಿರ್ವಹಿಸಿದ ಮಹತ್ವಾಧನೆಗಳನ್ನು ಜನರು ಎಂದಿಗೂ ಮರೆಯುವುದಿಲ್ಲ. ಹಾಗೆ ತಾವುಗಳು ಜರುಗಿಸಿದ ಕ್ರಮಗಳು ಪರಿಣಾಮಕಾರಿಯಾಗಿ ಜನವರ್ಗದ ಮೇಲೆ ಉಳಿಯುತ್ತವೆ. ಇಂಥ ಕಾರ್ಮಿಕ ವರ್ಗದವರ ಕಲ್ಯಾಣಕಾರಿ ಕ್ರಮಗಳನ್ನು ತಾವುಗಳು ಯಶಸ್ವಿಯಾಗಿ ನಿರ್ವಹಿಸುತ್ತೀರಿ ಎಂದು ನಂಬಿದ್ದೇನೆ. ತಮ್ಮ ಗಮನಕ್ಕೆ ಒಂದು ವಿಚಾರ ತರುವುದೇನೆಂದರೆ, ತಾವುಗಳು ಈ ಪದವಿಯಲ್ಲಿರುವವರೆಗಾದರೂ ಕಾರ್ಮಿಕರ ಹಿತರಕ್ಷಣೆಗಾಗಿ ಸಲಹೆ-ಸೂಚನೆಗಳನ್ನು ಪಡೆದುಕೊಳ್ಳಲು ಕಾರ್ಮಿಕ ಮುಖಂಡರುಗಳನ್ನು ಕರೆದು, ಆಹ್ವಾನಿಸಿ ಚರ್ಚೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಸರಕಾರದ ಪರವಾಗಿ ಅವರನ್ನು ಕರೆದು ಚರ್ಚಿಸಿದರೆ ಎಷ್ಟೊ ಉತ್ತಮ